## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 2067/2016

ಪ್ರಾಸಾ : 01
ಚಾಸಾ : 02

| | | |
|---|---|---|
| ಹೆಸರು | : | ಮೋಹನ್ ಶೆಟ್ಟಿ @ ಮೋನಪ್ಪ ಶೆಟ್ಟಿ |
| ತಂದೆಯ ಹೆಸರು | : | ಪದ್ಮಯ್ಯ ಶೆಟ್ಟಿ |
| ಪ್ರಾಯ | : | 50 ವರ್ಷ |
| ಉದ್ಯೋಗ | : | ಸಿವಿಲ್ ಕಾಂಟ್ರಾಕ್ಟರ್ |
| ವಾಸಸ್ಥಳ | : | ಮೂಡಪಡುಕೋಡಿ ಗ್ರಾಮ |

ದಿಃ 26/08/2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. 01-05-2015 ರಂದು ಬೆಳಿಗ್ಗೆ ನಾನು ಕಾಮಗಾರಿ ಪ್ರಯುಕ್ತ ಬಿ ಸಿ ರೋಡ್ ನಿಂದ ಮಂಗಳೂರು ಕಡೆಗೆ ನನ್ನ ಬಾಬ್ತು ಮಾರುತಿ ಶಿಫ್ಟ್ ಕಾರ್ ನಂ. ಕೆಎ-19-ಎಮ್ ಸಿ-5189 ರಲ್ಲಿ ಬಿ ಸಿ ರೋಡ್ ರಾಮಲ್ ಕಟ್ಟೆ , ಬಂಟರ ಭವನ ಎದುರಿನ ರಸ್ತೆಯಲ್ಲಿ ಹೋಗುವ ಸಂದರ್ಭದಲ್ಲಿ ಬೆಳಿಗ್ಗೆ 9.10 ಗಂಟೆಗೆ ನನ್ನ ಕಾರಿನ ಬಲಭಾಗದಲ್ಲಿ ಅತೀ ವೇಗ ಮತ್ತು ಅಜಾಗರೂಕತೆಯಿಂದ ಓವರ್ ಟೇಕ್ ಮಾಡಿ ಕಾರಿನ ಬಲಭಾಗಕ್ಕೆ ಜಖಂಗೊಳಿಸಿ, ನಾನು ಮುಂದೆ ಹೋಗದಂತೆ Alto Car ಕೆಎ-21-ಎಮ್ಎ-7157 ನ್ನು ಅದರ ಚಾಲಕ ಅಡ್ಡಲಾಗಿ ನಿಲ್ಲಿಸಿದರು. ಅದರ ಚಾಲಕ ಮತ್ತು ಮತ್ತೊಬ್ಬ ಕೈಯಲ್ಲಿ ಚೂರಿಯನ್ನು ಹಿಡಿದುಕೊಂಡು ನನ್ನ ಕಾರಿನ ಹಿಂದಿನ ಎಡದ ಮೇಲ್ಭಾಗಕ್ಕೆ ಚೂರಿಯಿಂದ ಕಡಿದು, ಕಾರನ್ನು ಜಖಂಗೊಳಿಸಿ ಸುಮಾರು 25 ಸಾವಿರ ನಷ್ಟು ನಷ್ಟವನ್ನು ಮಾಡಿರುತ್ತಾರೆ. ಅಲ್ಲದೇ ಕಾರಿನ ಹಿಂಬದಿಯ ಡೋರನ್ನು ತೆರೆಯಲು ಪ್ರಯತ್ನಿಸಿರುತ್ತಾರೆ. ನಾನು ಅದನ್ನು ಒಳಗಿನಿಂದ ಲಾಕ್ ಮಾಡಿರುತ್ತೇನೆ. ಚೂರಿಯನ್ನು ಹಿಡಿದುಕೊಂಡು "ಬೇವಾರ್ಸಿ, ಸೂಳೆ ಮಗ" ಎಂದು ಅತ್ಯಂತ ಕೆಟ್ಟ ಪದಗಳಿಂದ ಬೈದು, 3 ನೇ ಆರೋಪಿಯು ಕೇಳಿದಷ್ಟು ಹಣವನ್ನು ಕೊಡದೇ ಹೋದಲ್ಲಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ನನಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ನಾನು ಮತ್ತು ನನ್ನೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮೇಸ್ತ್ರಿ ಅಣ್ಣು ಪೂಜಾರಿ ಮಂಗಳೂರಿನ ಕಡೆ ಕಾರಿನಿಂದ ಹೊರಟ್ಟಿರುತ್ತೇವೆ.

2. ಅದೇ ದಿನ ಸಂಜೆ 6.30 ಗಂಟೆಗೆ ಬಂಟ್ವಾಳ ಗ್ರಾಮಾಂತರ ಪೋಲಿಸ್ ಠಾಣೆಗೆ ಹೋಗಿ ಲಿಖಿತ ದೂರನ್ನು ನೀಡಿರುತ್ತೇನೆ. ಲಿಖಿತ ದೂರನ್ನು ನಿಪಿ 4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಮರು ದಿನ ದಿ. 02-10-2015 ರಂದು ತಕ್ಷೀರು ಸ್ಥಳಕ್ಕೆ ಪೋಲಿಸರು ಬೇಟಿ ನೀಡಿದಾಗ ನಾನು ಹಾಜರಿದ್ದು ತೋರಿಸಿಕೊಟ್ಟಂತೆ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಚಾಸಾ 4, 5 ಮತ್ತು ನನ್ನ ಸಮಕ್ಷಮ ಪೋಲಿಸರು ಮಹಜರ್ ಮತ್ತು ನಕಾಶೆಯನ್ನು ತಯಾರಿಸಿದರು. ಸ್ಥಳ ಮಹಜರನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

3. ದಿ. 05-10-2015 ರಂದು ಪೋಲಿಸ್ ಠಾಣೆಯಲ್ಲಿ ಮರು ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದಿರು ಮರುದ ಹಿಡಿದಿಂದ ಕೂಡಿದ ಚೂರಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿ ಕಾಣುವ Alto Car ಕೆಎ-21-ಎಮ್‌ಎ-7157 ನ್ನು ಸಾಕ್ಷಿ ನೋಡಿ ಗುರುತಿಸಿದರು.

4. ತಕ್ಷೀರು ನಡೆಸಿದ ಆರೋಪಿತರನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ಗೈರು ಹಾಜರಾಗಿ ವಿನಾಯಿತಿ ಕೋರಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಎಪಿಪಿಯವರು ಮುಂದುವರೆದ ಮುಖ್ಯ ವಿಚಾರಣೆ ನಡೆಸಲು ಕಾಲವಕಾಶವನ್ನು ಕೋರಿರುತ್ತಾರೆ. ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ , ಆರೋಪಿ ಪರ ವಕೀಲರು ಪಾಟೀ ಸವಾಲು ನಡೆಸುವ ನಿಬಂದನೆಗೆ ಒಳಪಟ್ಟು ಹಾಗೂ ಎಪಿಪಿಯವರು ಮುಖ್ಯ ವಿಚಾರಣೆಯನ್ನು ನಡೆಸುವಂತೆ ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು)

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ